ದಲ್ಲು ಮತ್ತು ಸೂಳಕೆರೆ–ಡಾವಣಗೆರೆ ರಸ್ತೆಯನ್ನು ಉತ್ತಮ ಸ್ಥಿತಿಗೆ ತರುವ ವಿಚಾರದಲ್ಲು ಬಂದ ಚವಎೊಗ್ಗ ಡಿವೀಜ್ಞ ಎಗ್ಜಿಕ್ಯೂಟಿವ್ ಇಂಜನಿಯರವರ ಮಾಹೆ ಮಜುಕೂರು 2ನೇ ಮುರ್ಕುಂ ನಂಬರು 412ನೇ ಡಾಕೀಟ್ ಆಖೈರಾಗಿ ವುಳ್ಳ ಕಾಗದ ಪತ್ರಗಳು ಓದಲಾಗಿ ಸದರಿ ರಸ್ತೆಗೆ ದರ ವೈಲಿ 1ಕ್ಕೆ ಹಾಲಿ ಇರುವ 30—0—0 ರೂಪಾಯಿನ ಅಲಾಟ್ಮೆಂಟನ್ನು 50—0—0 ರೂಪಾಯಿಗೆ ಹೆಚ್ಚಿಸಬಹುದೆಂತ ಬೋರ್ಡಿನವರು ತೀರ್ಮಾನಿಸಿದ್ದಲ್ಲದೆ ಡಾವಣಗೆರೆಗೆ ಹೋಗಲು ಸೂಳಕೆರೆಯಿಂದ ಡಾವಣಗೆರೆ ತಾಲ್ಲೋಕು ಹದ ಡಿಗೆ ಹೋಗಿ ಸೇರುವ ರಸ್ತೆಯನ್ನು ಪೂರೈಸಲೂ ಬಂದು ಅಂದಾಜಾವನ್ನು ತಯಾರ್ಮಾಡಿಸುವ ವಿಚಾರದಲ್ಲಿ ಎಗ್ಜಿಕ್ಯೂಟಿವ್ ಇಂಜಿನಿಯರವರನ್ನು ಕೇಳಿಕೊಳ್ಳಬೇಕಾಗಿಯು ತೀರ್ಮಾನಿಸಿದರು.

5. ಬರುವ ದಸರಾ ಪ್ರಜಾ ಪ್ರತಿನಿಧಿ ಸಭೆಗೆ ಮೆಂಬರುಗಳನ್ನು ಚುನಾಯಿಸುವದು :—ಈ ವರುಷದ ದಸರಾ ಪ್ರಜಾ ಪ್ರತಿನಿಧಿ ಸಭೆಗೆ ಬೋರ್ಡಿನ ಪರವಾಗಿ ಮೆ॥ ನಾಡಿಗ ಗೋಪಾಲಪ್ಪನವರು ಮತ್ತು ಅರಮನೆ ಕೊಪ್ಪದ ರಾಮಪ್ಪನವರು ಚುನಾಯಿಸಲ್ಪಡ ತಕ್ಕದ್ದೆಂದು ಬೋರ್ಡಿನಲ್ಲಿ ತೀರ್ಮಾನವಾಯಿತು. ಈ ದೊಡ್ಡ ಮನುಷ್ಯರು ತಮ್ಮ ನೇಮಣೂಕವನ್ನು ಅಂಗೀಕರಿಸಿ ಇರುತ್ತಾರೆ.

6. ಕೊಡಶಾದ್ರಿ ಪರ್ವತದ ಮೇಲಿನ 3 ಕೊಣಗಳ ರಿಪೇರಿ :—ಕೊಡಶಾದ್ರಿ ಪರ್ವತದ ಮೇಲೆ ಇರುವ ಮೂರು ಕೊಣಗಳು ರಿಪೇರಿಗಾಗಿ 528—0—0 ರೂಪಾಯಿನ ಅಂದಾಜು ಮತ್ತು ಸಾಗರ ತಾಲ್ಲೋಕು ಅಮಲ್ದಾರ್ 1903ನೇ ಇಸವಿ ಮೇ 6ನೇ ಮುರ್ಕುಂ 990—1574ನೇ ನಂಬರು ರಿಪೋರ್ಟನೊಡನೆ ಬಂದ ಸಾಗರ ಸಬ್ ಡಿವೀಜ್ಞ ಛಾರ್ಜಿನಲ್ಲಿ ಇರುವ ಅಸಿಸ್ಟೆಂಟ್ ಕಮಿಷನರವರ 1903ನೇ ಇಸವಿ ಮೇ 13ನೇ ಮುರ್ಕುಂ 905—557ನೇ ನಂಬರು ಯಾದಾಸ್ತು ಓದಲಾಗಿ ಪರ್ವತದ ಮೇಲೆ ಇರುವ ಕಾವುಸರೋವರ ಮತ್ತು ಹುಲಿದೇವರ ದೇವಸ್ಥಾನದ ಸಮೀಪದಲ್ಲಿರುವ ಕೊಣವನ್ನು ಸಹಾ ರಿಪೇರಿ ಮಾಡುವದಕ್ಕಾಗಿ (465–0–0) ರೂಪಾಯಿನ ಅಂದಾಜು ಮಂಜೂರ್ಮಾಡಬಹುದಾಗಿ ಬೋರ್ಡಿನವರು ತೀರ್ಮಾನಿಸಿದರು.

7. ನ್ಯಾಮತಿ–ಸುರಹೊನ್ನೆ ರಸ್ತೆ :—ನ್ಯಾಮತಿ–ಸುರಹೊನ್ನೆ ರಸ್ತೆಯನ್ನು ಉತ್ತಮ ಸ್ಥಿತಿಗೆ ತರಲೂ ಇದಕ್ಕೆ ತಗಲುವ ಛಾರ್ಜಿನಲ್ಲಿ ಅರ್ಧ ಛಾರ್ಜನ್ನು ಲೋಕಲ್ ಫಂಡ್ಸಿನಿಂದ ಕೊಡಬೇಕೆಂಬುವ ವಿಚಾರದಲ್ಲಿ ಬಂದ ಹೊನ್ನಾಳಿ ತಾಲ್ಲೋಕು ಅಮಲ್ದಾರ್ 1903ನೇ ಮೇ 13ನೇ ಮುರ್ಕುಂ ನಂಬರು 251—1873ನೇ ರಿಪೋರ್ಟು ಓದಲಾಗಿ ಈ ರಸ್ತೆ ಸರಿಮಾಡುವದಕ್ಕಾಗಿ ತಗಲುವ ಲಾಗವಡಿನಲ್ಲಿ ಅರ್ಧ ಲಾಗವಡನ್ನು ಲೋಕಲ್ ಫಂಡ್ಸಿನಿಂದ ಕೊಡಲೂ ಬೋರ್ಡಿನವರು ಒಪ್ಪಿಕೊಂಡರು.

8. ನ್ಯಾಮತಿ ಹಂಗಾಮಿ ಆಸಪತ್ರೆ :—ಆಸಪತ್ರೆ ಲವಾಜಮಾ ಖರ್ಚಿನಲ್ಲಿ $\frac{2}{3}$ನೇ ಭಾಗದ ಖರ್ಚನ್ನು ಲೋಕಲ್ ಫಂಡ್ಸಿನಿಂದ ಕೊಡತಕ್ಕದ್ದಾಗಿ ಇರುತ್ತದೆಂದು ವಿಧಾಯಕವಾಗಿ ಇರುವ ಪೂರ್ವದ ಚೀಫ್ ಕಮಿಷ್ಶನರ್ ಸಾಹೇಬರವರ 1875ನೇ ಇಸವಿ ಅಕ್ಟೋಬರ್ 26ನೇ ಮುರ್ಕುಂ ನಂಬರು 6123—ಜನರಲ್ 141ನೇ ಪ್ರೊಸಿಡಿಂಗ್ಸಿನ 6ನೇ ಪ್ಯಾರಾಕ್ಕೆ ಗಮನಕೊಟ್ಟು ಅದರಲ್ಲಿ ನಮೂದಿಸಿರುವಂತೆ ಅರ್ಧ ಖರ್ಚಿಗೆ ಬದಲಾಗಿ $\frac{2}{3}$ನೇ ಭಾಗದ ಈ ಹಂಗಾಮಿ ಆಸ್ಪತ್ರೆಯ ಖರ್ಚನ್ನು ಲೋಕಲ್ ಫಂಡ್ಸಿನಿಂದ ವಹಿಸುವ ವಿಚಾರದಲ್ಲಿ ಈ ಅಂಶವನ್ನು ಬೋರ್ಡಿನವರ ಮುಂದೆ ಇಟ್ಟು ಅವರ ತೀರ್ಮಾನವನ್ನು ತಿಳಿಯಪಡಿಸಬೇಕೆಂಬುವ ವಿಚಾರದಲ್ಲಿ ಬಂದ ಜನರಲ್ ಮತ್ತು ರೆವಿನ್ಯು ಸೆಕ್ರೆಟರಿಯವರ ಮಾಹೆ ಮಜಕೂರು 25ನೇ ಮುರ್ಕುಂ 18130 ಎಲ್. ಎಫ್. 140—02ನೇ ನಂಬರು ಡಾಕೀಟ್ ಓದಲಾಗಿ ಈ ನ್ಯಾಮತಿ ಹಂಗಾಮಿ ಆಸ್ಪತ್ರೆಯ ಖರ್ಚಿನಲ್ಲಿ $\frac{2}{3}$ನೇ ಭಾಗ ಖರ್ಚನ್ನು ಲೋಕಲ್ ಫಂಡ್ಸಿನಿಂದ ವಹಿಸಲೂ ಬೋರ್ಡಿನವರು ಪೊಪ್ಪಿಕೊಂಡರು.

9. ವುಳವಿ ಇನ್ಸ್ಪೆಕ್ಷನ್ ಲಾಡ್ಜ್ ಕೇರಟೇಕರನಿಗೆ ಅಲೋಯನ್ಸು :—ಡಿಸ್ಟ್ರಿಕ್ಟು ಫಂಡ್ಸಿನಿಂದ ಹೊಸದಾಗಿ ರಿಪೇರಿಯಾಗಿ ಇರತಕ್ಕ ವುಳವಿಯಲ್ಲಿ ಇರುವ ಮುಸಾಫರಖಾನೆ ಯಾನೆ ಛತ್ರದ ನಿಗೇವಾನಿ ಮತ್ತು ಇದನ್ನು ಶುಚಿಯಾಗಿ ಇಟ್ಟುಕೊಂಡಿರಲೂ ವುಳವಿಯಲ್ಲಿ ಇರುವ ಇನ್ಸ್ಪೆಕ್ಷನ್ ಲಾಡ್ಜ್ ಕೇರಟೇಕರನಿಗೆ ಮಾಹೇಯಾನಾ ಎರಡು ರೂಪಾಯಿನ ಅಲೋಯನ್ಸನ್ನು ಕೊಡುತ್ತಾ ಬರಬೇಕೆಂಬದಾಗಿ ಸಾಗರದ ಸಬ್ ಡಿವಿಜ್ಞ ಚಾರ್ಜಿನಲ್ಲಿ ಇರುವ ಅಸಿಸ್ಟೆಂಟ್ ಕಮಿಷನರವರು ಅಭಿಪ್ರಾಯ ಪಟ್ಟದ್ದನ್ನು ಎಗ್ಜಿಕ್ಯೂಟಿವ್ ಇಂಜಿನಿಯರವರು ಅನುಮೋದಿಸಿದ್ದರ ಮೇಲೆ ಈ ವುಳವಿ ಇನ್ಸ್ಪೆಕ್ಷನ್ ಲಾಡ್ಜ್ ಕೇರಟೇಕರನಿಗೆ ಮಾಹೆಯಾನಾ ಎರಡು ರೂಪಾಯಿನ ಅಲೋಯನ್ಸನ್ನು ಕೊಡುವದು ಮಂಜೂರು ಮಾಡಬಹುದಾಗಿ ಬೋರ್ಡಿನವರು ತೀರ್ಮಾನಿಸಿದರು.

ಕೆ. ಪಿ. ಪುಟ್ಟಣ್ಣಶೆಟ್ಟಿ,
ಪ್ರೆಸಿಡೆಂಟ್, ಡಿಸ್ಟ್ರಿಕ್ಟ್ ಫಂಡ್ ಬೋರ್ಡು.

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟಿನಲ್ಲಿ.

ಸ್ಯ 1902—1903ನೇ ಇಸವಿ ಆರ್ಜೀ ನಂಬರ್ 403.

ಅರ್ಜೀದಾರ್ ಬೆಂಗಳೂರು ಇಂಪೀರಿಯಲ್ ರಿಜಿಮೆಂಟ್ B ಸ್ಕ್ವಾಡ್ರನ್ ಲ್ಯಾನ್ಸ್ ದಪೇದಾರ್ ಕಾಶೀರಾವು ಖದಂ, ಮೈನರಾದ ಬೆಂಗಳೂರು ಸ್ಥಳದ ರಾವ್‌ಸಾಬ್ ಖದಂ ಯವರ ಪುಕ್ಕಳು 1ನೇ ಗಾಥರಾವು ಖದಂ, 2ನೇ ವಿಶ್ವನಾಥರಾವು ಖದಂ, 3ನೇ ಚಿದಂಬರ ರಾವು ಖದಂ ಯವರ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಗಾಥರಾವು ಖದಂ, ವಿಶ್ವನಾಥರಾವು ಖದಂ, ಚಿದಂಬರರಾವು ಖದಂ ಯವರಿಗೆ ಆಂಣನು ಆಗಬೇಕೆಂಬ ಹಕ್ಕಿನ ಮೇಲೆ ಬೆಂಗಳೂರು ಸ್ಥಳದ ಕಾಶೀರಾವು ಖದಂ ಯವರು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರಟಿಫಿಕೇಟ್ ಬಗ್ಗೆ ಅಜೀಸ್ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಗೆ ಸ್ಯ 1903ನೇ ಇಸವಿ ಆಗಸ್ಟ್ ತಾರೀಖು 14ರಲ್ಲು ಮೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡಲಾಗಿಧೆ.

ಸ್ಯ 1903ನೇ ಇಸವಿ ಜುಲೈ ತಿಂಗಳು 10ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಂ. ರಾಮಸ್ವಾಮಯ್ಯರ್, ಡಿಸ್ಟ್ರಿಕ್ಟ್ ಜಡ್ಜ್.

ಶಿವಮೊಗ್ಗ ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟ್‌ನಲ್ಲಿ.

ಸ್ ೧೯೦೨—೧೯೦೩ನೇ ಇಸವಿ ಮಿ॥ ಅರ್ಜೀ ನಂಬರ್ 249.

ನಾಗರದಲ್ಲಿದ್ದ ಮೃತಪಟ್ಟ ಚಲುವೈಂಗಾರ್‌ವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು) ಲಕ್ಷ್ಮಮ್ಮ ಕೋಂ ಚಲುವೈಂಗಾರು), ನೋವಯ್ಯಪಲ್ಲಿ ಹೋಬಳಿ ಶ್ರೀನಿವಾಸಪುರ ತಾಲ್ಲೂಕು ಕೋಲಾರ ಡಿಸ್ಟ್ರಿಕ್ಟು, ಮೃತಪಟ್ಟ ಸದರೀ ಚಲುವೈಂಗಾರ್‌ಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಕೋಲಾರ ಡಿಸ್ಟ್ರಿಕ್ಟು ಶ್ರೀನಿವಾಸಪುರ ತಾಲ್ಲೂಕು ನೋವಯ್ಯಪಲ್ಲಿ ಸ್ಥಳದ ಲಕ್ಷ್ಮಮ್ಮ ಕೋಂ ಚಲುವೈಂಗಾರು) ನಾಗರ ವಾಸಸ್ಥರಾಗಿ ಮೃತಪಟ್ಟ ಚಲುವೈಂಗಾರ್ರ ಜಿಂದಗಿ ಬಗ್ಯಾಗಿ ಬರತಕ್ಕ 410—0—0 ರೂಪಾಯಿ ಸಾಲವನ್ನು ವಸೂಲ್ಮಾಡುವದಕ್ಕೆ 1901ನೇ ಇಸವಿ VIIನೇ ನಂಬರ್ ರೆಗ್ಯುಲೇಷ್ನ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಲಕ್ಷ್ಮಮ್ಮನವರ ಅರ್ಜಿಯನ್ನು ಸ್ ೧೯೦೩ನೇ ಇಸವಿ ಜುಲೈ ತಿಂಗಳು ತಾರೀಖು 24ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚಲುವೈಂಗಾರ್ರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೩ನೇ ಇಸವಿ ಜೂನ್ ತಿಂಗಳು 30ನೇ ತಾರೀಖಿನಲ್ಲಿ ಕೋರ್ಟು ಮೊಹರ್ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿ ಇದೆ.

ಸ್ ೧೯೦೨—೧೯೦೩ನೇ ಇಸವಿ ಮಿ॥ ಅರ್ಜೀ ನಂಬರ್ 250.

ಮೃತಪಟ್ಟ ಶಿವಮೊಗ್ಗ ತಾಲ್ಲೂಕು ಹಿರಿಯೂರು ಮಾಗಣಿ ಬಮ್ಮನಕಟ್ಟೆಯಲ್ಲಿದ್ದ ಬಂದಂಣನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು) ಸಂಕವ್ಮ್ಮ ಕೋಂ ಬಂದಂಣನವರು, ಮೃತಪಟ್ಟ ಸದರೀ ಬಂದಂಣನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಶಿವಮೊಗ್ಗ ತಾಲ್ಲೂಕು ಹಿರಿಯೂರು ಮಾಗಣಿ ಬಮ್ಮನಕಟ್ಟೆ ಸ್ಥಳದ ಸಂಕವ್ಮ್ಮನೆಂಬವರು ಡಿಟೋ ಬಮ್ಮನಕಟ್ಟೆ ವಾಸಸ್ಥರಾಗಿ ಮೃತಪಟ್ಟ ಬಂದಂಣನವರ ಜಿಂದಗಿ ಬಗ್ಯಾಗಿ ಬರತಕ್ಕ 75—0—0 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ VIIನೇ ನಂಬರು ರೆಗ್ಯುಲೇಷ್ನ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸಂಕವ್ಮ್ಮನವರ ಅರ್ಜಿಯನ್ನು ಸ್ ೧೯೦೩ನೇ ಇಸವಿ ಜುಲೈ ತಿಂಗಳು ತಾರೀಖು 24ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬಂದಂಣನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೩ನೇ ಇಸವಿ ಜುಲೈ ತಿಂಗಳು 9ನೇ ತಾರೀಖಿನಲ್ಲಿ ಕೋರ್ಟು ಮೊಹರ್ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ ೧೯೦೨—೦೩ನೇ ಇಸವಿ ಮಿ॥ ಅರ್ಜಿ ನಂಬರ್ 253.

ಮೃತಪಟ್ಟ ಕುಂಸಿ ಸಬ್ ತಾಲ್ಲೂಕು ಹಾರನಹಳ್ಳಿಯಲ್ಲಿದ್ದ ಸರಾಫ್ ಶೀನಪ್ಪನಾಯಿಕರ ಆಸ್ತೀ ವಿಷಯದಲ್ಲಿ—

ಅರ್ಜೀದಾರು) ಸರಾಫ್ ಗುರ್ಯಾವ್ ಬಿ ಸರಾಫ್ ಶೀನಪ್ಪನಾಯಿಕರು, ಮೃತಪಟ್ಟ ಸದರೀ ಶೀನಪ್ಪ ನಾಯಿಕರಿಗೆ ಖಾಸಾ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಹಾರನಹಳ್ಳಿ ಸ್ಥಳದ ಸರಾಫ್ ಗುರ್ಯಾವ್ ಯೆಂಬುವರು ಹಾರನಹಳ್ಳಿ ವಾಸಸ್ಥರಾಗಿ ಮೃತಪಟ್ಟ ಸರಾಫ್ ಶೀನಪ್ಪನಾಯಿಕರ ಜಿಂದಗಿ ಬಗ್ಯಾಗಿ ಬರತಕ್ಕ 1,351—2—10 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ 7ನೇ ನಂಬರು ರೆಗ್ಯುಲೇಷ್ನ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸರಾಫ್ ಗುರ್ಯಾವ್ಯವರ ಅರ್ಜಿಯನ್ನು ಸ್ ೧೯೦೩ನೇ ಇಸವಿ ಜುಲೈ ತಿಂಗಳು ತಾರೀಖು 31ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸರಾಫ್ ಶೀನಪ್ಪನಾಯಿಕರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೩ನೇ ಇಸವಿ ಜುಲೈ ತಿಂಗಳು 9ನೇ ತಾರೀಖಿನಲ್ಲಿ ಕೋರ್ಟು ಮೊಹರ್ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ ೧೯೦೨—೧೯೦೩ನೇ ಇಸವಿ ಮಿ॥ ಅರ್ಜೀ ನಂಬರ್ 254.

ಮೃತಪಟ್ಟ ಶಿಕಾರಿಪುರ ತಾಲ್ಲೂಕು ವುಡಗಣಿಯಲ್ಲಿದ್ದ ಸ್ವಾಮಿರಾವ್ ಎಂಬವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು) 1ನೇ ಆನಂದರಾವ್ ಬಿ ಸ್ವಾಮಿರಾವ್, 2ನೇ ಶೇಷಗಿರಿರಾವ್, ಶಿಕಾರಿಪುರ ತಾ॥ ವುಡಗಣಿ ವಾಸಿ, ಮೃತಪಟ್ಟ ಸದರೀ ಸ್ವಾಮಿರಾಯರಿಗೆ ಖಾಸಾ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಶಿಕಾರಿಪುರ ತಾಲ್ಲೂಕು ವುಡಗಣಿ ಸ್ಥಳದ ಆನಂದರಾವ್ ಶೇಷಗಿರಿರಾವ್ ಯವರು ಡಿಟೋ ವುಡಗಣಿ ವಾಸಸ್ಥರಾಗಿ ಮೃತಪಟ್ಟ ಸ್ವಾಮಿರಾಯರ ಜಿಂದಗಿ ಬಗ್ಯಾಗಿ ಬರತಕ್ಕ (652—8—0) ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ೧೯೦೧ನೇ ಇಸವಿ VIIನೇ ನಂಬರ್ ರೆಗ್ಯುಲೇಷ್ನ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೇ ಆನಂದರಾವ್, 2ನೇ ಶೇಷಗಿರಿರಾವ್ಯವರ ಅರ್ಜಿಯನ್ನು ಸ್ ೧೯೦೩ನೇ ಇಸವಿ ಜುಲೈ ತಿಂಗಳು ತಾರೀಖು 31ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸ್ವಾಮಿರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೩ನೇ ಇಸವಿ ಜುಲೈ ತಿಂಗಳು 12ನೇ ತಾರೀಖಿನಲ್ಲಿ ಕೋರ್ಟು ಮೊಹರ್ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಶೇಷಯ್ಯಂಗಾರ್, ಶಿರಸ್ತೆದಾರ್.

ಬೆಂಗಳೂರು ಸಬ್ ಜಡ್ಜ್‌ರವರ ಕೋರ್ಟ್‌ನಲ್ಲಿ.

ಸ್ ೧೯೦೩—೧೯೦೪ನೇ ಇಸವಿ ಮಿ॥ ಅರ್ಜೀ ನಂಬರ್ 16.

ಅರ್ಜೀದಾರು) ಬೆಂಗಳೂರು ಅಕ್ಕೀಪೇಟೆಲಿರುವ ಕೊಟೆಗೆ ಮುನಿಯಪ್ಪನ ಹೆಂಡತಿ ತಿಮ್ಮಕ್ಕ, ವೈನರಾದ 1ನೇ ಮುನಿಸಾಮಿ, 2ನೇ ವೆಂಕಟರಮಣ, 3ನೇ ಸಂಜೀವಪ್ಪ, 4ನೇ ಕೃಷ್ಣಪ್ಪ, 5ನೇ ಮುನಿಯಪ್ಪ ಯಂಬವರ ಆಸ್ತೀ ವಿಷಯಲ್ಲಿ—

ಸದರೀ ವೈನರಾದ 1ನೇ ಮುನಿಸಾಮಿ ವಗೈರೇರಿಗೆ ತಾಯಿ ಆಗಬೇಕೆಂಬ ಹಕ್ಕಿನ ಮೇಲೆ ಕೊಟೆಗೆ ಮುನಿಯಪ್ಪನ ಹೆಂಡತಿ ತಿಮ್ಮಕ್ಕನೆಂಬವರು ಸದರೀ ವೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸ್ ೧೯೦೩ನೇ ಇಸವಿ ಆಗಸ್ಟ್ ತಾರೀಖು 7ರಲ್ಲು ಮೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡೋಣಾಗಿದೆ.

ಸ್ ೧೯೦೩ನೇ ಇಸವಿ ಜುಲೈ ತಿಂಗಳು 13ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಪಿ. ಶಿಂಗ್ರಾಚಾರ್, ಸಬ್ ಜಡ್ಜ್.

ಚಿಕ್ಕಮಗಳೂರು ಸಬಾರ್ಡಿನೇಟ್ ಜಡ್ಜ್‌ರವರ ಕೋರ್ಟ್‌ನಲ್ಲಿ.

ಸ್ರ 1902—1903ನೇ ಇಸವಿ ಅರ್ಜಿ ನಂಬರ್ 345.

ಮೃತಪಟ್ಟ ಖರೀದಿ ಶೀನಪ್ಪನ ಆಸ್ತೀ ವಿಷಯದಲ್ಲಿ—

(1) ಅರ್ಜೀದಾರ್ ಬೆಂಗಳೂರು ಡಿಸ್ಟ್ರಿಕ್ಟ್ ತ್ಯಾಮಗೊಂಡ್ಲು ನಲ್ಲಿ ಇರುವ ಅನುಪೂರ್ಣಮ್ಮ ಮೈನರ್, ಗಾರ್ಡಿಯರ್ ತಂದೆ ಗುರಪ್ಪಶೆಟ್ಟಿ, ಮೃತಪಟ್ಟ ಖರೀದಿ ಶೀನಪ್ಪನವರಿಗೆ ಹೆಂಡತಿಯಾಗಬೇಕೆಂಬ ಹಕ್ಕುದಾರಿ ಮೇಲೆ ಕಡೂರು ತಾಲ್ಲೂಕು ಬೀರೂರುನಲ್ಲಿ ವಾಸಸ್ಥರಾಗಿ ಮೃತಪಟ್ಟ ಖರೀದಿ ಶೀನಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ 7ನೇ ರೆಗ್ಯುಲೇಷ್ನ ಪ್ರಕಾರ ಸರಟಿಫಿಕೇಟ್ ಬಗ್ಯೆ ಈ ಕೋರ್ಟ್‌ಗೆ ಖಾಯಿಷ್ ಮಾಡಿರುತ್ತಾರೆ.

(2) ಸದರೀ ದರಖಾಸ್ತುದಾರರಾದ ಅನುಪೂರ್ಣಮ್ಮ ಮೈನರ್, ಗಾರ್ಡಿಯರ್ ಗುರಪ್ಪಶೆಟ್ಟಿಯವರ ಅರ್ಜಿಯನ್ನು ಸ್ರ 1903ನೇ ಇಸವಿ ಸೆಪಟಂಬರ್ ತಿಂಗಳು ತಾರೀಖು 3ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಖರೀದಿ ಶೀನಪ್ಪನ ಆಸ್ತಿಗೆ ಹಕ್ಕುದಾರರಾದ ಏನಿಪ್ಪರೂ ಈ ಕೋರ್ಟ್‌ನಲ್ಲಿ ಹಾಜರಿ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

(3) ಸ್ರ 1903ನೇ ಇಸವಿ ಜುಲೈ ತಿಂಗಳು 17ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ಪರಮಶಿವ ಐಯ್ಯರ್, ಸಬಾರ್ಡಿನೇಟ್ ಜಡ್ಜ್.

ದೊಡ್ಡಬಳ್ಳಾಪುರದ ಮುನ್ಸೀಫ್ ಕೋರ್ಟ್‌ನಲ್ಲಿ.

ತಾರೀಖು ನೇ ಜುಲೈ 1903ನೇ ಇಸವಿ.

ಸಮಸ್ತ ಜನಗಳಿಗು ತಿಳಿಯಪಡಿಸುವದೇನಂದರೆ—ಇದರಡಿ ಲಗತ್ತು ಮಾಡಿರುವ ಲೀಸ್ಟಿನಲ್ಲಿ ಕಂಡ ಲೇಟ್ ನೆಲವಂಗಲದ ಮುನ್ಸೀಫ್ ಕೋರ್ಟ್‌ನಲ್ಲಿ ಜಡ್ಜ್‌ಮೆಂಟ್ ಡಿಟರುಗಳು ಪಾವತಿ ಮಾಡಿದ ಮೊಬಲಗು ಪಾವತಿ ಆಗದೆ ಡಿಪಾಜಿಟ್‌ನಲ್ಲಿ ಬಿಳಿದು ಇರುವದನ್ನ ಪಡಿಯಲು ಹಕ್ಕು ಬಿಳ್ಳವರು ಈ ಲಾಗಾಯಿತು 6 ತಿಂಗಳಲ್ಲಿ ಅವರ ಅವರ ಹಕ್ಕನ್ನು ಸ್ಥಾಪನೆಯಿಂದ ತೆಗದುಕೊಳ್ಳಬೇಕು.

ಸದರೀ ಲೀಸ್ಟಿನಲ್ಲಿ ನಮೂದಾಗದೆ ಇರುವ ಇತರ ಕಕ್ಷಿಗಾರರು ಸಹಾ ಆ ಕೋರ್ಟ್‌ನಲ್ಲಿ ಡಿಪಾಜಿಟ್ ಮಾಡಿದ್ದಾಗಿದ್ದು ಆ ಮೊಬಲಗು ಪಾವತಿ ಆಗದೆ ಇದ್ದರೆ ಅಂಥಾವರು ಕೂಡಾ ಅವರ ಅವರಿಗೆ ಬರಬೇಕಾದ ಹಣಕ್ಕೆ ತಕ್ಕ ರುಜುವಾತಿನವೊಡನೆ ಇದನ್ನು ಬಹಿರಂಗಪಡಿಸಿದ ತಾರೀಖು ಲಾಗಾಯಿತು 6 ತಿಂಗಳಲ್ಲಿ ಈ ಕೋರ್ಟು ರೂಬರೂಬ್ ಹಾಜರಾಗಿ ತಮ್ಮ ಹಕ್ಕನ್ನು ಸ್ಥಾಪನೆ ಮಾಡಿಕೊಳ್ಳಬೇಕು.

ಆರೀತಿ ಮಾಡದೆ ತಪ್ಪಿದ್ದೆ ಆದರೆ ಆರು ತಿಂಗಳು ಗತಿಸಿದ ನಂತರ ಅವರ ಹಕ್ಕನ್ನು ಕೋರ್ಟಿನವರು ಅಂಗೀಕರಿಸುವದಿಲ್ಲಾ.

ಲೇಟ್ ನೆಲವಂಗಲದ ಮುನ್ಸೀಫ್ ಕೋರ್ಟ್‌ನಲ್ಲಿ ಜಡ್ಜ್‌ಮೆಂಟ್ ದೇಸೆದಾರರಿಂದ ಕೋರ್ಟ್‌ಗೆ ಜವಾಬಂದ ಹಣ ಪಾವತಿ ಆಗದೆ ಡಿಪಾಜಿಟ್‌ನಲ್ಲಿರತಕ್ಕ ಮೊಬಲಗನ್ನು ತೋರಿಸುವ ತಖ್ತೆ.

ಜವಾಬಂದ ಸಾಲ್ ಮಾಹೆ ತಾರೀಖು.	ರಿಜಿಷ್ಟರ್ ನಂಬರು.	ಸಂಗತಿ.	ಮೊಬಲಗು. ರೂ. ಆ. ಪೈ.
27— 1—1900	849	O. S. No. 291—99-00 Ex. No. 664—99-00 ನೇ ನಂಬರಿನಲ್ಲಿ ಪ್ರತಿವಾದಿ ಮಲ್ಲಂಣನಿಂದ ವಾದಿ ಪಾಪಂಣನಿಗೆ ಪಾವತಿ ಬಗ್ಯೆ.	3 10 0
31— 1—1900	850	O. S. No. 574—99-00 ಪ್ರತಿವಾದಿ ಗರುಡಪ್ಪನಿಂದ ವಾದಿ ಸಂತಾಜೆರಾವ್‌ಗೆ ಸಲ್ಲತಕ್ಕ ಬಗ್ಯೆ.	1 12 0
17— 2—1900	855	O. S. No. 555—97-98 Exn. Case No. 632-99-00 ಹರಾಜ್‌ದಾರ್ ಸೈದ್ ವಿೂರಾಸಾಬಿಯಿಂದ ವಾದಿ ರಾಜಾ ದೊಡ್ಡ ನಂಜಪ್ಪನಿಗೆ ಪಾವತಿ ಆಗಿರುವದು ಜಾತಾ ಪ್ರತಿವಾದಿಗೆ ಪಾವತಿ ಬಗ್ಯೆ.	13 7 3
21— 2—1900	859	O. S. No. 385—99-00 ಪ್ರತಿವಾದಿ ಕುಳ್ಳೆಗೌಡನಿಗೆ ಪಾವತಿ ಬಗ್ಯೆ ವಾದಿಕಡೆ ಪ್ಲೀಡರ್ ಮೆ॥ ಅಪ್ಪುರಾಯರಿಂದ.	30 0 0
24— 2—1900	861	O. S. No. 291—99-00 Ex. No. 664—99-00 ಹರಾಜ್‌ದಾರ್ ಮತ್ತು ವಾದಿ ಪಾಪಂಣನಿಂದ ಪ್ರತಿವಾದಿಗಳು ರಾಮಂಣ, ಚಿಕ್ಕರಾಮಂಣ ಇವರಿಗೆ ಪಾವತಿ ಬಗ್ಯೆ.	0 5 3
2— 3—1900	863	O. S. No. 59—96-7 Ex. No. 665—99-00 ಸಾವಂದಪ್ಪನ ಸ್ವತ್ತು ಹರಾಜಾದ್ದು ಮೊಬಲಗು, ಚನ್ನಗೌಡನಿಂದ ರುಮಾಲೆ ರುದ್ರಪ್ಪನಿಗೆ ಪಾವತಿ ಆಗಿರುವದು ಜಾತಾ ಬಾಕಿ ಪ್ರತಿವಾದಿ ಸಾವಂದಪ್ಪನ ಪಾವತಿ ಬಗ್ಯೆ.	18 9 9
19— 5—1900	877	O. S. No. 331—97-98 Ex. No. 901—99-00 ಪ್ರತಿವಾದಿ ಗೋವಿಂದನ ಸ್ವತ್ತು ಹರಾಜಿನಲ್ಲಿ ಪಡದ ಲಂಕೆಪ್ಪನಿಂದ ವಾದಿ ವೀರಭದ್ರಯ್ಯನಿಗೆ ಪಾವತಿ ಬಗ್ಯೆ.	5 0 0

ಜವಾ ಬಂದ ಸಾಲ್ ಮಾಹೆ ತಾರೀಖು.	ರಿಟ್ಟ್ ಅರಿಡರ್ ನಂಬರು.	ಸಂಗತಿ.	ಮೊಬಲಗು. ರೂ. ಆ. ಪೈ.
12— 7—1900	899	O. S. No. 315—95-96 ಪ್ರತಿವಾದಿ ಅಹೋಬಲರಾಯರಿಂದ ವಾದಿ Ex. No. 1236—99-00 ಆಲಂಪಲ್ಲಿ ಲಕ್ಷ್ಮೈಯ್ಯನಿಗೆ ಪಾವತಿ ಆದ್ದು ಜಾತಾ ಬಾಕಿ ಪ್ರತಿವಾದಿ ಅಹೋಬಲರಾಯರಿಗೆ ಪಾವತಿ ಬಗ್ಗೆ.	20 15 8
13— 8—1900	910	O. S. No. 713—99-00 2ನೇ ಪ್ರತಿವಾದಿ ಗಂಗಮ್ಮನಿಂದ ವಸೂ Ex. No. 235—00-01 ಲಾದ ವಾದಿ ನಂಜುಂಡಪ್ಪನಿಗೆ ಪಾವತಿ ಬಗ್ಗೆ.	1 6 4
22— 8—1900	915	O. S. No. 507—95-96 1ನೇ ಸುಬ್ಬಾಭಟ್ಟ, 2ನೇ ಮೈಲಾರ, Ex. No. 389—96-97 3ನೇ ಕೃಷ್ಣಪ್ಪ ಇವರಿಗೆ ಪಾವತಿ ಬಗ್ಗೆ.	49 0 0
21—12—1900	939	O. S. No. 418—99-00 ವಾದಿ ಮತ್ತು ಹರಾಜ್‌ದಾರ್ ರಾಜಾ ದೊಡ್ಡ Ex. No. 418—00-01 ನಂಜಪ್ಪನಿಂದ ವಸೂಲಾದ್ದು ಪ್ರತಿವಾದಿಗಳು 1ನೇ ರುದ್ರೈಯ್ಯ, 2ನೇ ಕೆಂಪಲಿಂಗೈಯ್ಯ ಇವರಿಗೆ ಪಾವತಿ ಬಗ್ಗೆ.	0 2 10
4— 1—1901	942	O. S. No. 218—99-00 ಪ್ರತಿವಾದಿ ಲಂಕೆಗೌಡನಿಂದ ವಸೂಲಾದ್ದು Ex. No. 754—00-01 ವಾದಿ 1ನೇ ಪುಟ್ಟರಂಗಶೆಟ್ಟಿ, 2ನೇ ಕೃಷ್ಣ ಶೆಟ್ಟಿ ಇವರಿಗೆ ಪಾವತಿ ಬಗ್ಗೆ.	31 0 9
4— 1—1901	943	O. S. No. 546—95-96 ಪ್ರತಿವಾದಿಗಳು 1ನೇ ರೇವಕ್ಕ, 2ನೇ ಮೂ Ex. No. 370—00-01 ಡ್ಲೈಯ್ಯ ಇವರಗಳಿಂದ ವಾದಿ 1ನೇ ಪುಟ್ಟ ರಂಗಶೆಟ್ಟಿ, 2ನೇ ಕೃಷ್ಣಶೆಟ್ಟಿ ಇವರ ಗಾರಡಿಯರ್ ರಂಗನರಸಿಂಹ್ಮಯ್ಯಶೆಟ್ಟಿ ಮೂಲಕ ಪಾವತಿ ಬಗ್ಗೆ.	16 12 0
15— 1—1901	947	O. S. No. 427—00-01 ಪ್ರತಿವಾದಿ ಲಂಕೆಗೌಡನಿಂದ 1ನೇ ವಾದಿ ಪುಟ್ಟರಂಗ ಶೆಟ್ಟಿ, 2ನೇ ಕೃಷ್ಣಶೆಟ್ಟಿ ಇವರ ಗಾರಡಿಯರ್ ರಂಗನರಸಿಕ್ಕಯ್ಯ ಶೆಟ್ಟಿ ಮೂಲಕ ಪಾವತಿ ಬಗ್ಗೆ.	100 0 0
15— 1—1901	948	O. S. No. 425—00-01 ಪ್ರತಿವಾದಿ ಲಂಕೆಗೌಡನಿಂದ ಹಾಜರ್ಮಾಡಲ್ಪ ಟ್ಟದ್ದು ವಾದಿಗಳು 1ನೇ ಪುಟ್ಟರಂಗ ಶೆಟ್ಟಿ, 2ನೇ ಕೃಷ್ಣಶೆಟ್ಟಿ ಇವರಗಳ ಗಾರಡಿಯರ್ ರಂಗನರಸಿಕ್ಕಯ್ಯ ಶೆಟ್ಟಿಗೆ ಪಾವತಿ ಬಗ್ಗೆ.	50 0 0
22— 1—1901	952	O. S. No. 339—99-00 1ನೇ ವಾದಿ ಚಿಕ್ಕಣ್ಣನಿಂದ ವಸೂಲಾದ ಕೋರ್ಟು ಖರ್ಚು ಪ್ರತಿವಾದಿ 1ನೇ ಕೋಟೆ ನರಸಿಹ್ಮಯ್ಯ ವಗೈರೇರಿಗೆ ಪಾವತಿ ಜಾತಾ 2ನೇ ಪ್ರತಿವಾದಿ ಗಿರಿಯಮ್ಮನಿಗೆ.	2 0 0
11— 2—1901	955	O. S. No. 223—1894 ಆಲಂಪಲ್ಲಿ ವೆಂಕಟನಾರಣಪ್ಪನಿಂದ ವಸೂಲಾ Ex. No. 628—00-01 ದ್ದು 5ನೇ ಪ್ರತಿವಾದಿ ಗೋವಿಂದಪ್ಪನ ಸ್ವತ್ತು ಹರಾಜು ಮಾಡಿದ್ದರಲ್ಲಿ ಹರಾಜು ಮೊಬಲಗು ಚಿಕ್ಕ ಗೋವಿಂದಪ್ಪನಿಗೆ ಪಾವತಿ ಬಗ್ಗೆ.	0 0 6
23— 2—1901	958	O. S. No. 121—00-01 ವಾದಿ ಮತ್ತು ಹರಾಜ್‌ದಾರ ಶಿದ್ದಮಲ್ಲಂಣ Ex. No. 626—00-01 ನಿಂದ ವಸೂಲಾದ್ದು ಪ್ರತಿವಾದಿ ಚನ್ನವೀರಪ್ಪನಿಗೆ ಪಾವತಿ ಬಗ್ಗೆ.	2 0 0
23— 2—1901	960	O. S. No. 479—99-00 ಕೋರ್ಟು ಖರ್ಚು ವಾದಿ ಚಿಕ್ಕರಂಗಯ್ಯ A. S. 95—00-01 ನಿಂದ ವಸೂಲಾದ್ದು ಹುಚ್ಚೈಯ್ಯನಿಗೆ ಪಾವತಿ ಬಗ್ಗೆ.	14 4 0
27— 2—1901	962	Mis. No. 432—99-00 ವಾದಿ ಮತ್ತು ಅರ್ಜಿದಾರ ಗಿರಿಯಪ್ಪನಿಂದ ಜಾರಿ 1174—00-01 ವಸೂಲಾದ ಕೋರ್ಟು ಖರ್ಚು ಪ್ರತಿವಾದಿ ಕಾಳಮ್ಮನಿಗೆ ಪಾವತಿ ಜಾತಾ ಬಾಕಿ ಅರ್ಜಿದಾರ ವಾದಿ ರಾಜಪ್ಪನಿಗೆ.	0 12 4

ಟಿ. ವೆಂಕೋಬರಾವ್,
ಮ್ಯಾನೇಜರ್.